**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ. 286/2015

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ವೆಂಕಟೇಶಪ್ಪ | ಸಿಡಬ್ಲೂಃ **2** |
| ತಂದೆ/ಗಂಡನ ಹೆಸರು | ಃ | ಕುರಿಗಳ ಬೈಯ್ಯಪ್ಪ | ಪಿಡಬ್ಲೂಃ **2** |
| ವಯಸ್ಸು | ಃ | 48 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ವ್ಯವಸಾಯ | 10.02.2026 |
| ವಾಸ ಸ್ಥಳ | ಃ | ಯರ್ರನಾಗೇನಹಳ್ಳಿ | |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಚಾಸಾ.**1, 3** ರಿಂದ **5** ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನನಗೆ ಈ ಪ್ರಕರಣ ವಿಚಾರಗಳು ಗೊತ್ತಿರುವುದಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

**(ಮಾನ್ಯ ಸ.ಸಅ.ರವರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿದ್ದು ಪಾಟೀ ಸವಾಲು ಮಾಡಲು ಅನುಮತಿ ಕೋರಿತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ನಮ್ಮ ಗ್ರಾಮದ ವಾಸಿಯಾದ ಆರೋಪಿರವರಿಗೆ ಚಾಸಾ 1 ರವರೊಂದಿಗೆ ಮದುವೆ ಯಾಗಿದ್ದು ಅವರಿಗೆ ಶೃತಿ ಎಂಬ ಮಗಳು ಇದ್ದಾರೆ ಎಂದರೆ ಸರಿ. ಅವರು ಸುಮಾರು 20 ವರ್ಷಗಳಿಂದ ಬೇರೆ ಬೇರೆ ವಾಸವಾಗಿರುತ್ತಾರೆ. ಚಾಸಾ 1 ರವರು ಜೀವನಾಂಶ ಕೋರಿ ಆರೋಪಿ ವಿರುದ್ಧ ದಾವೆಯನ್ನು ಹೂಡಿದ್ದ ಕಾರಣ ಆರೋಪಿಯು ಚಾಸಾ 1 ರವರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮನೆಯನ್ನು ಖಾಲಿ ಮಾಡು ಇಲ್ಲವಾದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿದಂತೆ ಪೋಲೀಸರಿಗೆ

ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಹೇಳಿಕೆಯನ್ನು ಒಪ್ಪದೇ ಇದ್ದ ಕಾರಣ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು.

ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಹಾಗಾಗಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಇಲ್ಲಃ**

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಕಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.